ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/10/2016-17. ದಿನಾಂಕ:08-09-2016.

| ವಾದಿಗಳು | ಪ್ರತಿವಾದಿಗಳು |
| --- | --- |
| 1)ವಿ.ಎಸ್.ರಾಕೇಶ ತಂದೆ ದಿವಂಗತ ವಿ.ಶಂಕರಗೌಡ<br>ಟಿ.ವಿ.ಎಸ್. ಷೋರೂಂ ಹತ್ತಿರ 06 ನೇ ವಾರ್ಡ್<br>ಕೊಟ್ಟೂರು ಪಟ್ಟಣ<br>2)ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ<br>3)ಕಾಳಮ್ಮ ಗಂಡ ಲೇಟ್ ಮಲ್ಲಿಕಾರ್ಜುನ<br>ದೂಪದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು | 1)ಎಂ.ಚನ್ನಬಸಪ್ಪ ತಂದೆ ಬುಳ್ಳಪ್ಪ<br>2)ಎ.ದೊಡ್ಡಮಲ್ಲಪ್ಪ ತಂದೆ ಸಣ್ಣ ಕೊಟ್ರಬಸಪ್ಪ<br>ದೂಪದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 442/5ಪೈಕಿ. ವಿಸ್ತೀರ್ಣ 0-25 ಸೆಂಟ್ಸು ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 442/5ಪೈಕಿ. ವಿಸ್ತೀರ್ಣ 0-25 ಸೆಂಟ್ಸು ಜಮೀನನ್ನು ಸದರಿ ಗ್ರಾಮದ ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ, ಕಾಳಮ್ಮ ಗಂಡ ಲೇಟ್ ಮಲ್ಲಿಕಾರ್ಜುನ ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ವಿ.ಎಸ್.ರಾಕೇಶ ತಂದೆ ದಿವಂಗತ ವಿ.ಶಂಕರಗೌಡ ಇವರು ದಿನಾಂಕ: 13-05-2015 ರ ಡಾಕ್ಯುಮೆಂಟ್ ನಂಬರ್: 488/2015-16. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ದೂಪದಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 15-06-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಎಂ.ಚನ್ನಬಸಪ್ಪ ತಂದೆ ಬುಳ್ಳಪ್ಪ, ಎ.ದೊಡ್ಡಮಲ್ಲಪ್ಪ ತಂದೆ ಸಣ್ಣ ಕೊಟ್ರಬಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 74/2014-15. ದಿನಾಂಕ 14-07-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 07-06-2016 ರಿಂದ 08-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ದೂಪದಹಳ್ಳಿ ಗ್ರಾಮದ ಸನಂ 442/5ಪೈಕಿ. ವಿಸ್ತೀರ್ಣ 0-25 ಸೆಂಟ್ಸು ಜಮೀನನ್ನು ಸದರಿ ಗ್ರಾಮದ ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ, ಕಾಳಮ್ಮ ಗಂಡ ಲೇಟ್ ಮಲ್ಲಿಕಾರ್ಜುನ ಇವರಿಂದ ದಿನಾಂಕ 13-05-2015 ರ ಡಾಕ್ಯುಮೆಂಟ್ ನಂಬರ್: 488/2015-16. ರ ಪ್ರಕಾರ ರೂ: 3.82.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಪು.ತಿ.ನೋ:-2

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ನಮ್ಮ ಸ್ವಾದೀನ ಅನುಭವದಲ್ಲಿರುವುದರಿಂದ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರು ಹೇಳಿಕೆಗಳನ್ನು ಕೇಳಿ ಸದರಿ ಜಮೀನು ತಕರಾರುದಾರರ ಹೆಸರು ಪಹಣಿಯಲ್ಲಿ ನಮೂದಿಲ್ಲ ಅಲ್ಲದೆ ನೊಂದಾಯಿತ ಕ್ರಯ ಪತ್ರ ರದ್ದು ಪಡಿಸುವ ಅಧಿಕಾರ ಕಂದಾಯ ನ್ಯಾಯಾಲಯಕ್ಕೆ ಇಲ್ಲದಿರುವುದರಿಂದ ಕ್ರಯ ಪತ್ರವನ್ನಾಧರಿಸಿ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 442/5ಪೈಕಿ. ವಿಸ್ತೀರ್ಣ 0-25 ಸೆಂಟ್ಸು ಜಮೀನನ್ನು ದಿನಾಂಕ 13-05-2015 ರ ಡಾಕ್ಯುಮೆಂಟ್ ನಂಬರ್: 488/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ವಿ.ಎಸ್.ರಾಕೇಶ ತಂದೆ ದಿವಂಗತ ವಿ.ಶಂಕರಗೌಡ ಕೊಟ್ಟೂರು ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಬಾದಿತರಾದರು ಸಿವಿಲ್ ನ್ಯಾಯಾಲಯದ ಮೊರೆ ಹೋಗಲು ಸಹಾ ತಿಳಿಸಲಾಯಿತು ಎಂದು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 08-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ವಿ.ಎಸ್.ರಾಕೇಶ ತಂದೆ ದಿವಂಗತ ವಿ.ಶಂಕರಗೌಡ ಟಿ.ವಿ.ಎಸ್.ಷೋರೂಂ ಹತ್ತಿರ 06 ನೇ ವಾರ್ಡ ಅಂಜೇನೇಯ ಬಡಾವಣೆ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ. ಕಾಳಮ್ಮ ಗಂಡ ಲೇಟ್ ಮಲ್ಲಿಕಾರ್ಜುನ ದೂಪದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎಂ.ಚನ್ನಬಸಪ್ಪ ತಂದೆ ಬುಳ್ಳಪ್ಪ. ಎ.ದೊಡ್ಡಮಲ್ಲಪ್ಪ ತಂದೆ ಸಣ್ಣ ಕೊಟ್ರಬಸಪ್ಪ. ದೂಪದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.